<u>ದಿನಾಂಕಃ**19-09-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಪಾಟೀ ಸವಾಲುಃ **3** ನೇ ಎದುರುದಾರರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>

ನಾನು 18 ವರ್ಷಗಳಿಂದ ಎಸ್ ಬಿ ಐ ಬ್ಯಾಂಕಿನಲ್ಲಿ ಉದ್ಯೋಗ ಮಾಡುತ್ತಾ ಇರುತ್ತೇನೆ. ನಾನು ಈಗ ಸೀನಿಯರ್ ಅಸೋಸಿಯೇಟರ್ ಅಂತ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಾ ಇರುತ್ತೇನೆ. ನಾನು 9-10 ವರ್ಷಗಳ ಹಿಂದೆ ಬಡ್ತಿ ಹೊಂದಿರುತ್ತೇನೆ. ನಾನು ಪ್ರಸ್ತುತ ಮಾಸಿಕ ಎಷ್ಟು ವೇತನ ಪಡೆಯುತ್ತೇನೆ ಎಂಬುದರ ಬಗ್ಗೆ ದಾಖಲೆ ಇದ್ದು ಅದನ್ನು ಹಾಜರುಪಡಿಸುತ್ತೇನೆ. ನಾನು ಮಾಸಿಕ ರೂ.1,16,000/- ವೇತನ ಪಡೆಯುತ್ತೇನೆ. ಅಪಘಾತ ಆದ ನಂತರ ಇಂಕ್ರಿಮೆಂಟ್ ಬಂದಿದ್ದು ನಾನು ಬಡ್ತಿ ಹೊಂದಿದ ಕಾರಣ ಬೇಡ ಎಂದು ಹೇಳಿರುತ್ತೇನೆ. ನಾನು ಅಪಘಾತ ಆಯಿತು ಎಂದು ಹೇಳುವ ಪೂರ್ವದಲ್ಲಿ ಯಾವ ರೀತಿ ವೇತಿ ವೇತನ ಪಡೆಯುತ್ತಿದ್ದೆನು ಅದೇ ರೀತಿ ಈಗಲೂ ಪಡೆಯುತ್ತಾರ ಇರುತ್ತೇನೆ ಎಂದರೆ ಸರಿ. ನಾನು ಕೊಪ್ಪದ ಸುಭಾಷ್ ನಗರ ರಸ್ತೆಯ ಶಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುತ್ತೇನೆ. ನಾನು ತಲಮಕ್ಕಿಯಲ್ಲಿ ವಾಸ ಇರುತ್ತೇನೆ.

2. ನಾನು ಕೆಲಸ ಸ್ಥಳದಿಂದ ತಲಮಕ್ಕಿಗೆ ಬಸ್ ನಲ್ಲಿ ಪ್ರಯಾಣ ಮಾಡುತ್ತೇನೆ. ಅಪಘಾತ ಪೂರ್ವದಲ್ಲಿಯೂ ಸಹ ನಾನು ಬಸ್ ನಲ್ಲಿ ಪ್ರಯಾಣ ಮಾಡುತ್ತಿದ್ದೆ ಎಂದರೆ ಸಾಕ್ಷಿ ನನ್ನ ಸ್ವಂತ ವಾಹನದಲ್ಲಿ ಬರುತ್ತಿದ್ದೆ ಎಂದು ಉತ್ತರಿಸುತ್ತಾರೆ. ನಾನು ಎಸ್.ಬಿ.ಐ ಜೆನರೆಲ್ ಲೈವ್ ಇನ್ಸೂರೆನ್ಸ್ ಅನ್ನು ನನ್ನ ವೇತನದಲ್ಲಿ ಪಾವತಿ ಮಾಡುವ ಮುಖಾಂತರ ಪಡೆದಿರುತ್ತೇನೆ. ನಾನು ಅಪಘಾತ ಆದ ನಂತರ ಎಸ್.ಬಿ.ಐ ಜೆನೆರಲ್ ಲೈಫ್ ಇನ್ಸೂರೆನ್ಸ್ ಮಾಹಿತಿ ಕೊಟ್ಟಿರುತ್ತೇನೆ. ನಾನು ಎರಡು ಆಪರೇಷನ್ ಸಂಬಂಧವಾಗಿ 60,000/- ಹಣವನ್ನು ನಾನು ಎಸ್ ಬಿ ಐ ಜೆನರಲ್ ಲೈಫ್ ಇನ್ಸೂರೆನ್ಸ್ ನಿಂದ ಪಡೆದುಕೊಂಡಿರುತ್ತೇನೆ. ನಾನು ಅಪಘಾತದಿಂದ ಎಷ್ಟು ಹಣವನ್ನು ಎಸ್.ಬಿ.ಐ ಜೆನರಲ್ ಲೈಫ್ ಇನ್ಸೂರೆನ್ಸ್ ನಿಂದ ಪಡೆದುಕೊಂಡಿರುತ್ತೇನೆ ಎಂಬುದರ ಬಗ್ಗೆ ಮಾಹಿತಿ ಪಡೆಯಲು ನನ್ನದು ಯಾವುದೇ ತಕರಾರು ಇರುವುದಿಲ್ಲ.

3. ನಾನು ಹಾಜರುಪಡಿಸಿರುವ ನಿಪಿ- 8 ರಲ್ಲಿ ಎಸ್.ಬಿ.ಐ ಜೆನರಲ್ ಇನ್ಸೂರೆನ್ಸ್ ನವರು ಹಣ ಪಾವತಿ ಮಾಡಿದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಪಿ- 8 ರಿಂದ 49 ವೈದ್ಯಕೀಯ ಬಿಲ್ಲುಗಳು ಹಣವನ್ನು ಎಸ್.ಬಿ.ಐ ಜೆನರಲ್ ಲೈಫ್ ಇನ್ಸೂರೆನ್ಸ್ ನಿಂದ ಪಾವತಿ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿ ವರ್ಷ ನನ್ನ ವೇತನದಲ್ಲಿ ರೂ. 17,000/- ಸಾವಿರ ಹಣವನ್ನು ಎಸ್.ಬಿ.ಐ ಜೆನರಲ್ ಲೈಫ್ ಇನ್ಸೂರೆನ್ಸ್ ಗೆ ಕಟ್ ಆಗುತ್ತದೆ. ಸದರಿ ಈ ರೀತಿ ಹಣ ಕಟ್ಟಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ

ಹಾಜರುಪಡಿಸುತ್ತೇನೆ. ನಾನು ವೈಧ್ಯಕೀಯ ಬಿಲ್ಲುಗಳನ್ನು ಈ ಅರ್ಜಿಗೋಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

4. ನಾನು ಅಪಘಾತ ಆದ ನಂತರ ಮಣಿಪಾಲ ಆಸ್ಪತ್ರೆ,ಉಡುಪಿ ಹೂಗೂ ರೆಟಿನ ಆಸ್ಪತ್ರೆ ಮಂಗಳೂರು ಇಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಈಗಲೂ ಸಹ ರೆಟಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುತ್ತೇನೆ. ನಾನು ಹಣವನ್ನು ಎಸ್ ಬಿ ಐ ಜೆನರಲ್ ಲೈಫ್ ಇನ್ಸೂರೆನ್ಸ್ ನಿಂದ ಪಡೆದ ಬಗ್ಗೆ ಸಂಬಂಧಿಸಿದ ಅಧಿಕಾರಿಯನ್ನು ವಿಚಾರಣೆ ಮಾಡಲು ನನ್ನ ಅಭ್ಯಂತರ ಇರುವುದಿಲ್ಲ. ನಾನು ಮಾರುತಿ ಕಾರಿನಲ್ಲಿ ಕೊಪ್ಪದಿಂದ ಮಣಿಪಾಲ ಆಸ್ಪತ್ರೆಗೆ ಹೋಗುತ್ತಿದ್ದೆನು. ಆ ದಿನ ನನ್ನ ಆರೋಗ್ಯದ ಸಮಾನ್ಯ ತಪಾಸಣೆಗಾಗಿ ಹೋಗುತ್ತಿದ್ದೆನು. ನಾನು ಚಲಾಯಿಸಿಕೊಂಡು ಹೋಗುತ್ತಿದ್ದ ಕಾರು 2004 ಕ್ಕೆ ಸಂಬಂಧಪಟ್ಟ ಕಾರು ಇರುತ್ತದೆ. ನಾನು ಚಲಾಯಿಸಿಕೊಂಡು ಹೋಗುತ್ತಿದ್ದ ಕಾರಿನಲ್ಲಿ ಎಫ್ ಸಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಎಫ್.ಸಿ ಇರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸುತ್ತೇನೆ. 1 ನೇ ಎದುರುದಾರರು ಬಸ್ ಅನ್ನು ರಸ್ತೆಯ ಎಡ ಬದಿಯಲ್ಲಿ ಚಲಾಯಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ನಾನು ಆ ದಿನ ರಸ್ತೆಯ ವಿರುದ್ಧ ದಿಕ್ಕಿಗೆ ಹೋಗಿ ಅಜಾಗರೂಕತೆಯಿಂದ ಅಪಘಾತ ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

5. ಕೃತ ಸ್ಥಳದ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಕೃತ್ಯ ಸ್ಥಳದ ನಕಾಶೆಯನ್ನು ಹಾಜರುಪಡಿಸಿದರೆ ನನ್ನ ತಪ್ಪು ಕಂಡು ಬರುತ್ತದೆ ಎಂದು ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜನ್ಮ ದಿನ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನನಗೆ ಈಗ 58 ವರ್ಷ ವಯಸ್ಸು ಇರುತ್ತದೆ. ಅಪಘಾತ ಆದರೂ ಸಹ ನಾನು 7 ದಿನಗಳ ಕಾಲ ಹೊರ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಿಪಿ- 25 ರಲ್ಲಿ ಟಿ ಟಿ ಕೆ ಎಂದು ನಮೂದು ಇದ್ದು ಅದು ಏನು ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತವು 1 ನೇ ಎದುರುದಾರರ ತಪ್ಪಿನಿಂದ ಆಗದೇ ಇರುವ ಕಾರಣ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ತೀವ್ರ ಸ್ವರೂಪದ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾಹನ ರಿಪೇರಿಗೆ ಹಣ ಖರ್ಚು ಮಾಡಿದ ಬಗ್ಗೆ ಯಾವುದೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಕಾರನ್ನು ಮಾರುತಿ ಸುಜುಕಿ ಅಥರೈಸೇಷನ್ ಗ್ಯಾರೇಜ್ ನಲ್ಲಿ ರಿಪೇರಿ ಮಾಡಿಸಿರುತ್ತೇನೆ. ಸದರಿ ಕಾರಿಗೆ ಅಂದಾಜು ಎಷ್ಟು ಹಣ ಖರ್ಚು ಆಗಿರುತ್ತದೆ ಎಂಬುದರ ಬಗ್ಗೆ ನಾನು ಸರ್ವೆ ವರದಿಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಕಾರಿಗೆ ಯಾವುದೇ ನಷ್ಟ ಉಂಟಾಗದೇ ಇದ್ದರು ನಷ್ಟ

ಉಂಟಾಗಿರುತ್ತದೆ ಎಂದು ಪರಿಹಾರ ಕೋರಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಕಾರು ಯಾವ ವಿಮಾ ಕಂಪನಿಯಲ್ಲಿ ವಿಮೇ ಹೊಂದಿತ್ತು ಎಂದು ನನಗೆ ಹೇಳಲು ಆಗುವುದ್ದಿಲ. ನಾನು ಕಾರಿಗೆ ಆದ ನಷ್ಟ ವನ್ನು ವಿಮಾ ಕಂಪನಿಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಆಗುವ ಕಾಲಕ್ಕೆ ನನ್ನ ಕಾರಿಗೆ ವಿಮೇ ಇದ್ದ ಬಗ್ಗೆ ದಾಖಲೆಯನ್ನು ನಾನು ಹಾಜರುಪಡಿಸುತ್ತೇನೆ. ನನ್ನ ಮುಂದುವರೆದ ಚಿಕಿತ್ಸೆ ಗೆ ರೂ.3 ಲಕ್ಷ ಹಣದ ಅವಶ್ಯಕತೆ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತದಿಂದ ಸಣ್ಣ-ಪುಟ್ಟ ಗಾಯಗಳಾಗಿದ್ದು ನಾನು ಸಂಪೂರ್ಣವಾಗಿ ಗುಣಮುಖನಾಗಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-50 ಮತ್ತು 51 ಅಪಘಾತ ಪೂರ್ವದ ದಾಖಲೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-50 ಮತ್ತು 51 ಅಪಘಾತ್ಕೆ ಸಂಬಂಧಿಸಿದ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತ ಪೂರ್ವದಲ್ಲಿನ ದಾಖಲೆಯನ್ನು ನ್ಯಾಯಾಲಯಕ್ಕೆ ಪರಿಹಾರ ಪಡೆಯುವ ಸಲುವಾಗಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ